

**ಚಿತ್ರಪಟ ಕಥನ**

# ಯಾನ ಧ್ಯಾನ

ಸರಳರೇಖೆಯ ಹಿಂದೆ ಅಡಗಿಕೊಳ್ಳಬಹುದಾದಷ್ಟು ಸರಳ ವ್ಯಕ್ತಿತ್ವ ಗಾಂಧಿಯದು. ಮಹಾತ್ಮನನ್ನು ರೇಖೆಗಳಲ್ಲಿ ಕಾಣಿಸುವ ಎಂ.ಎಸ್. ಮೂರ್ತಿ ಅವರ 'ಗಾಂಧಿಧ್ಯಾನ', ಸರಳತೆಯ ಅಸಾಧಾರಣ ಸೌಂದರ್ಯ ಮತ್ತು ಶಕ್ತಿಯನ್ನು ಸೂಚಿಸುವ ಕಲಾಕೃತಿಗಳಂತಿವೆ.



ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಸೃಜನಶೀಲ ಕಲಾವಿದನೊಬ್ಬ ನೀಡಬಹುದಾದ ಅತ್ಯುತ್ತಮ ಕೊಡುಗೆ ಯಾವುದಿರಬಹುದು? ಈ ಪ್ರಶ್ನೆಗೆ ಉತ್ತರ ರೂಪದಲ್ಲಿ ನಾಡಿನ ಹಿರಿಯ ಕಲಾವಿದ ಎಂ.ಎಸ್. ಮೂರ್ತಿ ಅವರ 'ಗಾಂಧಿ–75' ಕಲಾಕೃತಿಗಳನ್ನು ಗಮನಿಸಬಹುದು.

ಎಂ.ಎಸ್. ಮೂರ್ತಿ ಕಲಾವಿದ ಮಾತ್ರವಲ್ಲ, ಸಂಘಟಕ – ಕಲಾ ವಿಶ್ಲೇಷಕರೂ ಹೌದು. ಕವಿ, ಕಾದಂಬರಿಕಾರರೂ ಹೌದು. ಬುದ್ಧ ಹಾಗೂ ಬುದ್ಧ ಸಿದ್ಧಾಂತದ ಕುರಿತ ಅವರ ಬರಹ ಹಾಗೂ ಕಲಾಕೃತಿಗಳು ಸಹೃದಯರ ಗಮನಸೆಳೆದಿವೆ. ಬುದ್ಧನ ಬಟ್ಟಲು (ಬೌಲ್) ಅವರನ್ನು ಮತ್ತೆ



ಮತ್ತೆ ಕಾಡಿರುವ ರೂಪಕ. ಈಗ ಬುದ್ಧನ ಹೊಸ ಆವೃತ್ತಿಯಂತೆ ಕಾಣಿಸುವ ಗಾಂಧಿ ಅವರ ಮೈಮನಗಳನ್ನು ಆವರಿಸಿಕೊಂಡಿದ್ದಾರೆ.

ಬುದ್ಧನ ಬಟ್ಟಲು ಕಾಡಿದಂತೆ, ಗಾಂಧಿಯಲ್ಲಿ ಕಾಡಿದ ಅಂಶ ಯಾವುದು ಎಂದರೆ, 'ಸರಳತೆ' ಎನ್ನುತ್ತಾರೆ ಮೂರ್ತಿ. 'ಬಡತನದ ನಿಶ್ಶಬ್ದವನ್ನು ಗಾಂಧಿ ಅವರಂತೆ ಆಲಿಸಿದ, ಆ ಮೌನಕ್ಕೆ ಸ್ಪಂದಿಸಿದ ಮತ್ತೊಬ್ಬರನ್ನು ಕಾಣುವುದು ಕಷ್ಟ. ಆ ಸ್ಪಂದನ ಭಾರತೀಯ ಸಂಸ್ಕೃತಿಗೆ ಗಾಂಧಿ ನೀಡಿದ ಬಹುದೊಡ್ಡ ಕೊಡುಗೆ' ಎಂದು ಹೇಳುತ್ತಾರೆ.

'ಪ್ರತಿ ವರ್ಷ ಗಾಂಧಿ ಜಯಂತಿ ಬಂದಾಗಲೂ ಕಲಾವಿದನಾಗಿ ಏನಾದರೂ ಮಾಡಬೇಕು ಅನ್ನಿಸುತ್ತಿತ್ತು. ಆಗಾಗ ರೇಖೆಗಳಲ್ಲಿ ಗಾಂಧಿಯನ್ನು